ಆ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಜಮೀನು ಸಕ್ರಮೀಕರಣ ಅರ್ಜಿಗಳು

3298 (3296) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ-ಸಕ್ರಮ ಜಮೀನು ಮಂಜೂರಾತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ನಮೂನೆ 50 ಮತ್ತು 53ರ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು;

ಆ) ಬಂದ ಅರ್ಜಿಗಳಲ್ಲಿ ಜಮೀನು ಮಂಜೂರು ಆದ ಅರ್ಜಿಗಳು ಹಾಗೂ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಇತ್ಯರ್ಥಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ತಯಾರಾದ ಅರ್ಜಿಗಳು ಸಮಿತಿಯ ಮುಂದೆ ಮಂಡಿಸಬೇಕಾದ ಅರ್ಜಿಗಳೆಷ್ಟು;

ಈ) ಎಷ್ಟು ಅವಧಿಯೊಳಗೆ ಅಕ್ರಮ-ಜಮೀನು ಸಕ್ರಮೀಕರಣ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ನಮೂನೆ:50 — 10,558; ನಮೂನೆ:53 — 15,405

ಆ) ನಮೂನೆ:50 ಮಂಜೂರಾದ ಅಜಿ 3,582; ತಿರಸ್ಕೃತ ಅರ್ಜಿ 5,959

ನಮೂನೆ:53 ಮಂಜೂರಾದ ಅರ್ಜಿ 592; ತಿರಸ್ಕೃತ ಅರ್ಜಿ 613

ಇ) ನಮೂನೆ:50 — 1,017; ಅರ್ಜಿಗಳು ಬಾಕಿ ಇವೆ 1,017; ಸಮಿತಿಯ ಮುಂದೆ ಮುಂಡಿಸಬೇಕಾಗಿದೆ.

ನಮೂನೆ:53 — 14,200; ಅರ್ಜಿಗಳು ಬಾಕಿ ಇವೆ. 1,378; ಅರ್ಜಿ ಸಮಿತಿ ಮುಂದಿಡಬೇಕಾಗಿದೆ.

ಈ) ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು

ಹುಬ್ಬಳ್ಳಿ-ಧಾರವಾಡ ರಸ್ತೆ ಕುರಿತು

3301 (3312 : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ -ಧಾರವಾಡ ರಸ್ತೆ 4 ಪಥವಾಗಿ ಶೀಘ್ರದಲ್ಲಿ ಪರಿವರ್ತನೆ ಮಾಡುವ ಉದ್ದೇಶವಿದೆಯೇ;

ಆ) ಹಾಗಿದ್ದಲ್ಲಿ, ಹುಬ್ಬಳ್ಳಿ-ಧರವಾಡ ರಸ್ತೆ 4 ವೇ ಆಗಿ ಪರಿವರ್ತನೆಗೊಳ್ಳುವ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;